ಕರ್ನಾಟಕ ಸರ್ಕಾರ

ಉಪತಹಶೀಲ್ದಾರರವರ ನ್ಯಾಯಾಲಯ

ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

ಸಂ/ಕಂ/ಪಹಣಿ/ವಿವಾದ/08/2015-16 ದಿ.31.3.16

ಉಪಸ್ಥಿತರು :- ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು

ನಾಡಕಛೇರಿ ಹಂಪಸಾಗರ

| ವಾದಿಗಳು | ಪ್ರತಿವಾದಿಗಳು |
| --- | --- |
| ಶ್ರೀ ಮಾದನೂರಿ ಶ್ರೀನಿವಾಸರಾಜು | ಶ್ರೀ ತಾರೀಹಳ್ಳಿ ಸುರೇಶ |
| ತಂದೆ ರಾಮರಾಜು | ತಂದೆ ಹನುಮಂತಪ್ಪ |
| ಗ್ರಾಮ ಏಣ್ಗಿ ಬಸಾಪುರ | ಗ್ರಾಮ ಬನ್ನಿಕಲ್ಲು |

**ವಿಷಯ :- ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಏಣ್ಗಿ ಬಸಾಪುರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 8/2 ವಿಸ್ತೀರ್ಣ 2-89 ಎಕರೆ ಜಮೀನು ಹಕ್ಕು ಬದಲಾವಣೆ ವಿವಾದ ಕುರಿತು ವಿಚಾರಣೆ.**

**ಪೀಠಿಕೆ :-**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಏಣ್ಗಿ ಬಸಾಪುರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 8/2 ವಿಸ್ತೀರ್ಣ 2-89 ಎಕರೆ ಜಮೀನು ಕ್ರಯ ನೊಂದಣಿ ಪತ್ರಸಂಖ್ಯೆ ಹೆಚ್.ಬಿ.ಹೆಚ್-1-00028/2015-16/ದಿ: 06-04-2015 ರಂದು ವಾದಿಗಳು ಹಾಲೀ ಪಹಣಿ ಹಕ್ಕುದಾರರಾದ ಶ್ರೀ ತಾರೀಹಳ್ಳಿ ಹನುಮಂತಪ್ಪ ತಂದೆ ದಿ॥ ಕೆಂಚಪ್ಪ ಸಾಕಿನ್ ಬನ್ನಿಕಲ್ಲು ಇವರಿಂದ ಕ್ರಯಕ್ಕೆ ಹೊಂದಿರುತ್ತಾರೆ. ಕ್ರಯ ವ್ಯವಹಾರವು ಭೂಮಿಕೇಂದ್ರದಲ್ಲಿ ದಾಖಲಾಗಿ ವಹಿವಾಟು ಸಂಖ್ಯೆ 78, ಹಕ್ಕು ಬದಲಾವಣೆ ಸಂಖ್ಯೆ ಹೆಚ್.35/2014-15 ರಂತೆ ದಾಖಲಾಗಿ ವಹಿವಾಟಿಗೆ ಸಂಬಂಧಿಸಿದಂತೆ ಹಕ್ಕು ಬದಲಾವಣೆಗಾಗಿ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಕಂದಾಯ ನಿರೀಕ್ಷಕರು ಹಂಪಸಾಗರ ಇವರ ದ್ವಾರ ಗ್ರಾಮ ಲೆಕ್ಕಾಧಿಕಾರಿ ಏಣ್ಗಿ ಬಸಾಪುರ ಇವರ ಮುಖಾಂತರ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿಗೊಳಿಸಿರುತ್ತಾರೆ. ಜಾರಿ ಮಾಡಲಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳು ತಮ್ಮ ಲಿಖಿತ ತಕರಾರನ್ನು ಭೂಮಿಕೇಂದ್ರದಲ್ಲಿ ಸ್ವೀಕೃತಿ ಸಂಖ್ಯೆ 7738/2014-15 ರಂತೆ ದಾಖಲಾಗಿರುತ್ತದೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ಪ್ರಕರಣದ ವಿಚಾರಣೆಯನ್ನು ದಿನಾಂಕ: 15/10/2015 ರಿಂದ 31-03-2016 ರವರೆಗೆ ವಿಚಾರಣೆ ನಡೆಸಲಾಯಿತು.

ವಿಚಾರಣೆಯಲ್ಲಿ ವಾದಿಗಳು ಸತತ ಗೈರು ಹಾಜರಾಗಿದ್ದು ಇವರು ಹೈದರಾಬಾದ್‌ನಲ್ಲಿ ವಾಸವಾಗಿರುವುದಾಗಿ ಗ್ರಾಮ ಲೆಕ್ಕಾಧಿಕಾರಿಗಳ ವರದಿಯಿಂದ ಕಂಡು ಬರುತ್ತದೆ.

6/9/2016

ಪ್ರತಿವಾದಿಗಳ ಪರವಾಗಿ ನ್ಯಾಯವಾದಿಗಳಾದ 1) ಹುಲುಗಪ್ಪ ಸಿ. 2) ಗುರುಬಸವರಾಜ ಎನ್ ಇವರು ವಕಾಲತ್ ವಹಿಸಿಕೊಂಡು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳಿಂದ ಮಾನ್ಯ ಸಿವಿಲ್ ನ್ಯಾಯಾಲಯ ಹಗರಿಬೊಮ್ಮನಹಳ್ಳಿ ಇವರಲ್ಲಿ ಒ.ಎಸ್.ನಂ. 62/2016 ರ ಪ್ರಕಾರ ದಾಖಲಾಗಿರುತ್ತದೆ ಎಂದು ಮತ್ತು ಸಿವಿಲ್ ನ್ಯಾಯಾಲಯದಲ್ಲಿ ದಾಖಲಾದ ಬಗ್ಗೆ ಆರ್ಡರ್ ಶೀಟ್ ಪ್ರತಿ ಸಲ್ಲಿಸುತ್ತಾ ಪ್ರಕರಣ ನ್ಯಾಯಾಲಯದಲ್ಲಿ ದಾಖಲಾದ ಪ್ರಯುಕ್ತ ನಾಡಕಛೇರಿ ಹಂತದಲ್ಲಿ ದಾಖಲಾದ ಪ್ರಕರಣವನ್ನು ರದ್ದುಪಡಿಸಬೇಕೆಂದು ಕೋರಿರುತ್ತಾರೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ವಾದಿಯು ಆಂಧ್ರಪ್ರದೇಶದ ರಾಜ್ಯದ ಪೂರ್ವ ಗೋದಾವರಿ ಜಿಲ್ಲೆಯ ಐ.ಪೋಲವರಮ್ ಮಂಡಲ ಬ್ಲಾಕ್ ನಂ. 2 ರಲ್ಲಿ ವಾಸವಾಗಿರುವ ಬಗ್ಗೆ ಇವರು ಖರೀದಿಸಿರುವ ಕ್ರಯ ದಸ್ತಾವೇಜು ಪ್ರಕಾರ ಕಂಡು ಬರುತ್ತದೆ. ಇದರನ್ವಯ ಖರೀದಿದಾರರು ಕರ್ನಾಟಕ ಸರ್ಕಾರದ ಭೂಸುಧಾರಣಾ ಕಾಯಿದೆಯಂತೆ ಖರೀದಿ ಪೂರ್ವದಲ್ಲಿ ಅಧಿಕಾರಿಗಳಿಂದ ಪರವಾನಿಗೆ ಪಡೆಯುವುದು ಅತ್ಯವಶ್ಯಕವಾಗಿರುತ್ತದೆ. ಅಲ್ಲದೇ ಖರೀದಿದಾರರು ತಾವು 50,000/- ಆದಾಯ ಹೊಂದಿರುವುದಾಗಿ ಪ್ರಮಾಣಪತ್ರ ಹಾಜರು ಪಡಿಸಿದ್ದು ಪೂರಕ ದಾಖಲೆ ಸಲ್ಲಿಸಿರುವುದಿಲ್ಲ ಹಾಗೂ ಕರ್ನಾಟಕ ಭೂ ಸುಧಾರಣಾ ಕಾಯಿದೆಯಂತೆ ಭೂ ಪರಿಮಿತಿಯಲ್ಲಿರುವುದಾಗಿಯೂ ಪ್ರಮಾಣಪತ್ರ ಸಲ್ಲಿಸಿದ್ದು ಇದಕ್ಕೂ ಸಹ ಪೂರಕ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ವಾದಿಯು ಕರ್ನಾಟಕ ಭೂಸುಧಾರಣಾ ಕಾಯಿದೆ ಉಲ್ಲಂಘನೆಯಾಗಿರುವುದು ಕಂಡು ಬರುತ್ತದೆ. ಹಾಗೂ ಪ್ರಕರಣವು ಈ ಒಳಗಾಗಿ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ದಾಖಲಾಗಿ ವಿಚಾರಣೆಗೆ ಒಳಪಟ್ಟಿರುವುದರಿಂದ ಈ ಪ್ರಕರಣವನ್ನು ಮಾನ್ಯ ಸಿವಿಲ್ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ಈ ಕೆಳಕಂಡ

## <u>ಆದೇಶ</u>

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಏಣ್ಗಿ ಬಸಾಪುರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 8/2 ವಿಸ್ತೀರ್ಣ 2-89 ಎಕರೆ ಜಮೀನನ್ನು ಮಾನ್ಯ ಸಿವಿಲ್ ನ್ಯಾಯಾಕಯದ ಆದೇಶಕ್ಕೆ ಒಳಪಟ್ಟು ಈ ನ್ಯಾಯಾಲಯದ ಪ್ರಕರಣವನ್ನು ವಜಾಗೊಳಿಸಿ ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 31.3.16 ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಗಳು :
1) ವಾದಿ + ಪ್ರತಿವಾದಿಗಳು
2) ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ